Reg No. B G 155

1-7-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-0
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮಹಾಜನ್ ವರದಿ ಜಾರಿಯಾಗಲೆಂದು ಒತಾಯ

ಹರಿಜನ ಸಮ್ಮೇಳನ

ತುಮಕೂರು — ಕೊರಟಗೆರೆಯಲ್ಲಿ ಹರಿಜನ ಸಮ್ಮೇಳನವನ್ನು ಭಾನುವಾರ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ಉದ್ಘಾಟಿಸಿದರು ; ಎಂ ಪಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು ಅಧ್ಯಕ್ಷತೆ ವಹಿಸಿದ್ದರು – ಈ ಈರ್ವ ಮಹನೀಯರಿಗೂ ಬಿನ್ನನತ್ತಳಿ ಅರ್ಪಿಸಲಾಯಿತು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀನುನ್ಮಹಾರಾಜರು, ಮತ್ತಿತರೆ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮೋಟಾರು ಮೆರವಣಿಗೆ

ಹೈದರಾಬಾದು— ನಿನ್ನೆ ಜೋಡಿ ನಗರಗಳಲ್ಲಿ "ಅಧ್ಯಕ್ಷ ಆಳ್ವಿಕೆ ಕೇಳಿಕೆ ದಿನ" ಆಚರಿಸಲಾಯಿತು – ಮಧ್ಯಾಹ್ನಕ್ಕೆ ಮುಂಚೆ ಟ್ಯಾಕ್ಸಿಗಳ ಭಾರಿ ಮೆರವಣಿಗೆ, ಸಂಜೆ ಮಹಿಳೆಯರ ಭಾರಿಮೆರವಣಿಗೆ ನಡೆಯಿತು

★

ಇಂದಿರಾರವರಿತ್ತ ಪಾರಿತೋಷಕ

ಜಕರ್ತ— ಅಧ್ಯಕ್ಷ ಸುಹರ್ತೋರಿಗೆ ಭಾರತ ಪ್ರಧಾನಿ ಇಂದಿರಾರವರು, ರಾಮಾಯಣದ ಆಧಾರದ ಮೇಲೆ ಲಂಕಾ ಯುದ್ಧದ ಕೆತ್ತನೆಯ ದಂತದ ಪೆಟ್ಟಿಗೆಯನ್ನೂ ಅವರ ಪತ್ನಿಯವರಿಗೆ ಬೆನಾರಿಸ್ ಸೀರೆ ಮತ್ತಿತರ ಪದಾರ್ಥವಿತ್ತರು — ಅಧ್ಯಕ್ಷರು ಪ್ರಧಾನಿಯವರಿಗೆ ಬೆಳ್ಳೀ ಸರ್ವಿಸ್ ಸೆಟ್ ಇತ್ತರು.

★

ಡಾ ॥ ಮೋದಿ

ಪದ್ಮಭೂಷಣ ನೇತ್ರದಾನಿ ಡಾ ॥ ಎಂ. ಎಸ್. ಮೋದಿಯವರು ನಿನ್ನೆ ಜಪಾನಿನ ಟೋಕಿಯೋಗೆ ಪ್ರಯಾಣಮಾಡಿದರು.

★

ಸಿಲೋನಿಗೆ ಭಾರತದ ಸಾಲ

ನವದೆಹಲಿ— ಭಾರತದಿಂದ ಮುಖ್ಯ ಪದಾರ್ಥಗಳನ್ನು ಕೊಳ್ಳಲು ಸಿಲೋನಿಗೆ ಭಾರತವು ರೂ. 5 ಕೋಟಿ ಸಾಲ ಕೊಡಲು ಒಪ್ಪಿದೆ.

★

ಪೌರಸಭೆ ರದ್ದು

ಚಿತ್ರದುರ್ಗ— ಇಲ್ಲಿಯ ಪೌರಸಭೆಯನ್ನು ಜುಲೈ 1 ರಿಂದ ಸರ್ಕಾರ ರದ್ದುಗೊಳಿಸುವುದಾಗಿಯೂ. ತಾವು ಆಡಳಿತ ವಹಿಸಿಕೊಳ್ಳುವುದಾಗಿಯೂ ಜಿಲ್ಲಾಧಿಕಾರಿಗಳು ಹೇಳಿದರು.

ಎಲ್ಲಿಗೂ ಊಟ

ಕೊಚ್ಚಿ— ವೈಕೊಂನಲ್ಲಿ ಪ್ರಖ್ಯಾತ ಶಿವದೇವಾಲಯದ ಶಿವಕೂಟದಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟ ಹಾಕುತ್ತಿದ್ದ ಪುರಾತನ ಸಂಪ್ರದಾಯವನ್ನು ಮುರಿದು, ಹಿಂದೂಗಳ ಎಲ್ಲಾ ಕೋಮಿನವರಿಗೂ ಭೋಜನ ಹಾಕಲು ನಿರ್ಧರಿಸಲಾಗಿದೆ.

★

ನಕ್ಸಲೈಟು ಖೈದಿಗಳ ಸುಖ

ತ್ರಿವೇಂದ್ರ— ಕೇರಳ ಜೈಲಿನಲ್ಲಿ ನಕ್ಸಲೈಟು ಬಂದಿಗಳಿಗೆ ಒಳ್ಳೇ ಸುಖವಾಗಿದ್ದು ಇತರ ಖೈದಿಗಳಿಗೆ ಹಾಗಿಲ್ಲವೆಂದೂ, ಅವರಿಗೆ ಒಂದೂವರೆಯಷ್ಟು ಹೆಚ್ಚು ರೇಷನ್ ಕೊಡಲಾಗುವುದೆಂದೂ, ಮಜ್ಜಿಗೆ ಬದಲು ಮೊಸರು, ಬೆಳಿಗ್ಗೆ ಸಂಜೆ ಟೀ ಕೊಡಲಾಗುವುದೆಂದೂ, ವಿಶೇಷ ರೀತಿಯ ಮಂಚದ ಮೇಲೆ ಮಲಗಿ ಪತ್ರಿಕೆಗಳನ್ನೋದುವ ಅನುಕೂಲವುಂಟೆಂದೂ ಸರ್ವೋದಯ ನಾಯಕ ಶ್ರೀ ಕೇಳಪ್ಪನ್ ಹೇಳಿದರು — ಮಾಲಾಪುರ ಜಿಲ್ಲಾ ವಿರುದ್ಧ ಚಳವಳನ್ನು ತೀವ್ರಗೊಳಿಸಲಾಗುವದೆಂದೂ, ತಾ ॥ 16 ರಂದು ಸರ್ಕಾರಿ ಕಚೇರಿ ಮುಂದೆ ಎಲ್ಲಾ ರಾಜ್ಯಗಳ ಸಾಮೂಹಿಕ ಪಿಕೆಟಿಂಗು ನಡೆಸಲಾಗುವುದೆಂದೂ ಹೇಳಿದರು – ಕಲ್ಲೀಕೋಟೆಯಲ್ಲಿ ನಿನ್ನೆ 27 ಜನ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟರು.

★

ಪುರಸಭೆ

ಮೈಸೂರು— ಅಧ್ಯಕ್ಷೆ ಶ್ರೀ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಅಧಿವೇಶನದಲ್ಲಿ ನಗರದ ಎಲ್ಲ ಮನೆಗಳಿಗೂ ನೀರಿನ ನಿಗಾಟಿರು ಒದಗಿಸುವಂತೆ ಶ್ರೀ ಬಿ. ಸಿ. ಲಿಂಗಯ್ಯನವರು ಒತ್ತಾಯ ಮಾಡಿದರು – ವಯಸ್ಸಾದ ಜಾಡಮಾಲಿಗಳನ್ನು ನಿವೃತ್ತಿಗೊಳಿಸಲು ಒಂದು ಪರಿಶೀಲನಾ ಸಮಿತಿ ನೇಮಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಮೆರವಣಿಗೆಗಳು

ಬೆಂಗಳೂರು– ಶ್ರೀರಾಂಪುರದಲ್ಲಿ ಒಂದು ಕಾರ್ಮಿಕ ಸಂಘದವರು ನಿನ್ನೆ ಏರ್ಪಡಿಸಿದ್ದ ಸಭೆಯನ್ನು ಆತಂಕಪಡಿಸಲು ಬಂದ ವಿರೋಧಿ ಸಂಘದ 500 ಮಂದಿ ಗುಂಪನ್ನು ಚದುರಿಸಲು ಲಾಠಿಚಾರ್ಜು ಮಾಡಿದರು : ಗುಂಪಿನವರು ತೂರಿದ ಕಲ್ಲುಗಳಿಂದ ಕೆಲ ಮಂದಿ ಗಾಯಗೊಂಡರು ; ಗುಂಪಿನವರು ಕಾರ್ಮಿಕ ಸಂಘದ ಸೆಕ್ರೆಟರಿ ಮನೆ ಮೇಲೆ ಕಲ್ಲು ಬೀರಿದರು : 7 ಮಂದಿ ಬಂಧಿಸಲ್ಪಟ್ಟರು.

ಶ್ರೀ ವಾಟಾಲ್ ನಾಗರಾಜರವರ ನಾಯಕತ್ವದಲ್ಲಿ ಕನ್ನಡ ಚಳವಳಗಾರರು, ಮಹಾಜನ ಕಮಿಷನ್ ವರದಿಯನ್ನು ಜಾರಿಗೆ ತರಬೇಕೆಂದು ಮೆರವಣಿಗೆ ನಡೆಸಲಾಯಿತು – ಮಾರ್ಗದಲ್ಲಿ ಒಂದು ಅಂಗಡಿಗೆ ಕಲ್ಲುಬೀರಿ ನಷ್ಟಗೊಳಿಸಿದ ಆಪಾದನೆಗೆ 5 ಮಂದಿ ದಸ್ತಗಿರಿಮಾಡಲ್ಪಟ್ಟರು – ಪ್ರದರ್ಶನಕಾರರು ಕೇಂದ್ರ ಗೃಹಮಂತ್ರಿ ಶ್ರೀ ಚವ್ಹಣ್, ಮಹಾರಾಷ್ಟ್ರ ಮುಖ್ಯ ಮಂತ್ರಿ ನಾಯಿಕ್, ಮತ್ತು ಶ್ರೀ ಪಟಾಸ್ಕರ್‌ರ ಪ್ರತಿರೂಪುಗಳನ್ನು ಸುಟ್ಟರು.

ಕ್ರಾಂತಿಕಾರಿ ಯುವಜನ ಸಂಘದವರು ಕನ್ನಡ ನಿರುದ್ಯೋಗಿಗಳಿಗೆ ಸರ್ಕಾರಿ ಕೈಗಾರಿಕೆಗಳಲ್ಲಿ ಕೆಲಸ ಅಥವಾ ನಿರುದ್ಯೋಗ ಆಲೊಯನ್ಸ್ ಕೊಡಬೇಕೆಂದೂ ಮಹಾಜನ ಕಮಿಷನ್ ಕೂಡಲೇ ಜಾರಿಗೆ ತರಬೇಕೆಂದೂ ಒತ್ತಾಯಮಾಡಲು ಪಂಜು ಮೆರವಣಿಗೆ ನಡೆಸಲು ಪ್ರಯತ್ನಿಸಿದರು; ಪೋಲೀಸರು ಅಡ್ಡಿಪಡಿಸಲು ಅಲ್ಲೇ ಬೈಠಕ್ ಮಾಡಿ ಸಂಚಾರಕ್ಕೆ ಭಂಗಪಡಿಸಿದರು : 18 ಮಂದಿ ದಸ್ತಗಿರಿ ಮಾಡಲ್ಪಟ್ಟರು.

★ ಬೆಂಗಳೂರು— ಕಾಂಗ್ರೆಸ್ ರಾಜ್ಯಗಳಲ್ಲಿ ಕಾರ್ಮಿಕರ ಮೇಲೆ ಗೋಳೀಬಾರು ನಡೆಯುವದಕ್ಕಿಂತ, ಘೇರಾವೊ ಸಾಧುವಾದ ವಿಷಯವೆಂದು ಪಶ್ಚಿಮ ಬಂಗಾಳಾದ ಸಹಕಾರ ಮಂತ್ರಿ ಶ್ರೀಮತಿ ರೇಣು ಚಕ್ರವರ್ತಿ ಹೇಳಿದರು – ಇದು ಆಡಳಿತಗಾರರು ಮತ್ತು ಅಂತಹ ಅಧಿಕಾರಿಗಳಿಗೆ ಸ್ವಲ್ಪ ಅನಾನುಕೂಲವಾಗುವದೆಂದೂ, ಯಾವ ಅಪಾಯವಿಲ್ಲವೆಂದೂ ಹೇಳಿದರು.

ಸಂತ ಶ್ರೇಷ್ಠ ಮಾಣಿಕ್ಯ ವಾಚಕರ್

[' ಲೇಖನ ಕಾವೇರಿ ಯಿಂದ ']

ಶೈವಧರ್ಮ ಹೊಸ ಹುರುಪಿನಿಂದ ತಲೆಯೆತ್ತಿ ನಿಲ್ಲುವುದಕ್ಕೆ, ಹತ್ತೂ ಕಡೆಗೆ ಪಸರಿಸಿ ಜನಪ್ರಿಯವಾಗುವುದಕ್ಕೆ ಕಾರಣರಾದ ಸಂತರ ಬಳಗವೇ ದೊಡ್ಡದು. ಅವರೆಲ್ಲ ಅಚ್ಚಳಿಯದ ಭಕ್ತಿಗೆ, ಎಣೆಯಿಲ್ಲದ ಸೇವೆಗೆ, ಈಡಿಲ್ಲದ ಮಹತಿಗೆ ಹೆಸರಾದವರು.

ಇಂಥ ಸಂತಸಾಕ್ತಿಯಲ್ಲಿ ಮೊದಲಿಗರು ಮಾಣಿಕ್ಯ ವಾಚಕರ್. ಅವರು ಕ್ರಿಸ್ತಶಕ ನಾಲ್ಕನೆಯ ಶತಮಾನದಲ್ಲಿ ಇದ್ದರೆಂದು ಊಹಿಸುವುದಕ್ಕೆ ಆಧಾರವುಂಟು. ಅವರ ಪೂರ್ವಿಕರು ಬ್ರಾಹ್ಮಣರು. ಈ ಮನೆತನದ ಜನ ಪಾಂಡ್ಯ ರಾಜರಿಗೆ ವಂಶ ಪಾರಂಪರ್ಯವಾಗಿ ಪ್ರಧಾನ ಮಂತ್ರಿಗಳಾಗಿದ್ದರು.

ಬೆಳೆದು ದೊಡ್ಡವನಾದ ಹುಡುಗ ಹದಿನಾರನೇ ವಯಸ್ಸಿಗೇ ವೇದಾಗಮ ಪುರಾಣಗಳಲ್ಲಿ ಪ್ರಾಜ್ಞನಾದ. ಅವನ ಪ್ರತಿಭೆ ಪಾಂಡಿತ್ಯಗಳ ಸುದ್ದಿ ದೊರೆ ತಿರುಮಹನ ಪಾಂಡ್ಯನ ಕಿವಿಗೆ ಬಿದ್ದು ಅವನನ್ನು ಆಸ್ಥಾನಕ್ಕೆ ಕರೆಸಿಕೊಂಡ. ಅವನ ಬುದ್ಧಿಗೆ ಮೆಚ್ಚಿ ತನ್ನಲ್ಲಿ ಅತಿಶಯವಾದ ಪ್ರೀತ್ಯಾದರಗಳನ್ನು ತೋರಿಸುತ್ತಾ ಕ್ಷೌನೆಗೆ ಶಿವಜ್ಞಾನವನ್ನು ಮುಖ್ಯಮಾತ್ಯನನ್ನಾಗಿ ನೇಮಕಮಾಡಿದ. ರಾಜ್ಯಾಡಳಿತದ ವಿಶಿಷ್ಟ ಕಡಲಿತಸಂಪತ್ರವನ್ನು ಮುಖ್ಯಾಮಾತ್ಯನ ಕೈಗೊಪ್ಪಿಸಿ ದೊರೆ ನಿಶ್ಚಿಂತನಾಗಿಬಿಟ್ಟ.

ಅಧಿಕಾರಾರೂಢರಾದವರ ಮೇಲೆ ಮಾಣಿಕ್ಯವಾಚಕರಿಗಾದಷ್ಟೋ ಪ್ರಭಾವ ಪ್ರತಿಷ್ಠೆಗಳು ಬೆಳೆಯುತ್ತಾ ಹೋದಂತೆ ಆಸ್ಥಾನದ ಪಡಗರ ಸನ್ಮಾನಗಳು ಹೆಚ್ಚಿದಂತೆ ಕ್ಷಣಭಂಗುರವಾದ ಪ್ರಾಪಂಚಿಕ ಸುಖಸಂತೋಷಗಳಲ್ಲಿ ಜಿಜ್ಞಾಸೆ ಹುಟ್ಟಿತು. ಶಿವಪಂಚಾಕ್ಷರಿಯ ರಹಸ್ಯವನ್ನೂ ಜೀವನ್ಮುಕ್ತಿಯ ಮಾರ್ಗವನ್ನೂ ತೋರಿಸುವ ಸದ್ಗುರುವಿಗಾಗಿ ಅವರ ಹೃದಯ ಸದಾ ಹಾತೊರೆಯುತ್ತಿತ್ತು.

ಒಂದು ದಿನ ದೊರೆ ಆಸ್ಥಾನದ ಗಣ್ಯರೊಡನೆ, ಮಾಂಡಲಿಕರೊಡನೆ ಮಾತನಾಡುತ್ತಾ ಕುಳಿತಿತ್ತಾಗ ವಿದೇಶದ ಅಪರೂಪವಾದ ಕುದುರೆಗಳನ್ನು ಹೊತ್ತ ಹಡಗು ಪೆರಿಯಾಳು ತೀರಕ್ಕೆ ಬಂದಿಳಿದಿವೆಯೆಂಬ ಸುದ್ದಿ ಬಂದಿತು. ದೊರೆಗೆ ಅವುಗಳನ್ನು ಕೊಳ್ಳುವೆಕೆಂಬ ಆಸೆಯಾಯಿತು. ಕೂಡಲೇ ತಿರುಪೆರುಂದುರೈಗೆ ಹೋಗಿ ಕುದುರೆಗಳನ್ನು ಖರೀದಿ ಮಾಡುವಂತೆ ಆದೇಶವಿತ್ತು ಬೇಕಾದಷ್ಟು ಹಣವಿತ್ತು ಮುಖ್ಯಾಮಾತ್ಯನನ್ನು ಕಳಿಸಿದ.

Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜುಬಿಲಿಯ 6 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

.... ನೋಡಲು ತಪ್ಪಬೇಡಿ ....

ದು ನಿ ಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ॥ 23-5-69 ರಿಂದ ಪ್ರವೇಶದರಗಳನ್ನು ಕೆಳಗ್ಗೆನವೂಡಿಸಿರುವಂತೆ ಬದಲಾಯಿಸಿದೆ

ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡ್ಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಆಪೇರಾ— 27-6-69 ರಿಂದ

— ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಕನ್ನಡ ಚಿತ್ರ —

ಮಕ್ಕಳೇ ಮನೆಗೆ ಮಾಣಿಕ

ನಟವರ್ಗ— ಉದಯಕುಮಾರ್, ಬಿ. ವಿ. ರಾಧಾ, ಆದವಾನಿ ಲಕ್ಷ್ಮಿದೇವಿ, ಶೈಲಶ್ರೀ, ಜಯ, ದಿನೇಶ್, ಮಾಸ್ಟರ್, ಕೃಷ್ಣಕುಮಾರ್, ಬೇಬಿ ಪ್ರತಾಂತ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H H the Maharaja Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi. Sri Opera Talkies, Padmabhushana Dr. M.C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata Sri S Krishna Rao (Proprietor) at the Satyavadi Press Chamarajapuram, Mysore 4